# ಇಂದಿರಾಗಾಂಧಿಗೆ ಆರತಿ ಎತ್ತಿದಾಗ..

ಮಾಜಿ ಪ್ರಧಾನಿ ಇಂದಿರಾಗಾಂಧಿ ಎಂದರೆ ಹೆಣ್ಣುಮಕ್ಕಳಿಗೆಲ್ಲ ಏನೋ ಪುಳಕ, ಹೆಮ್ಮೆ. ಅವರನ್ನು ಅತ್ಯಂತ ಹತ್ತಿರದಿಂದ ನೋಡಿದ್ದು ಮಾತ್ರವಲ್ಲ; ಮೈಸೂರಿನಲ್ಲಿರುವ ನಮ್ಮ ಸಂಸ್ಥೆಗೆ ಅವರು ಭೇಟಿ ಇತ್ತಾಗ ಅವರಿಗೆ ಆರತಿ ಎತ್ತಿದ್ದು ಇನ್ನೂ ಮನಸ್ಸಿನಂಗಳದಲ್ಲಿ ಸವಿನೆನಪಾಗಿ ಉಳಿದಿದೆ. ನನಗೂ ನನ್ನಮ್ಮ 'ಇಂದಿರಾ' ಎಂದು ಹೆಸರಿಟ್ಟದ್ದು, ಸ್ಫೂರ್ತಿಯ ಜತೆಗೆ ಹೆಮ್ಮೆಯೂ ಕೂಡ.

**ಎಚ್.ಎಸ್. ಇಂದಿರಾ**



ಇಂದಿರಾಗಾಂಧಿ ಎಂದರೆ ಎಲ್ಲ ಮಹಿಳೆಯರಿಗೂ ಹೆಮ್ಮೆ. ಅವರು ನಮ್ಮ ಸಂಸ್ಥೆಗೆ ಬಂದದ್ದು, ಅವರನ್ನು ಅತ್ಯಂತ ಸನಿಹದಿಂದ ನೋಡಿದ್ದು, ಅವರಿಗೆ ಆರತಿ ಎತ್ತಿದ್ದು..ಎಲ್ಲವೂ ಕನಸಿನಂತೆ ನಡೆದು ಹೋಯಿತು. ಐವತ್ತು ವರ್ಷ ಹಿಂದೆ ಸಂಭ್ರಮಪಟ್ಟ ನನಗೆ ಆ ನೆನಪು ಎಂದಿಗೂ ಅಜರಾಮರವಾಗಿ ಉಳಿದಿದೆ.

ಹಿಂದೆ ಹೆಣ್ಣುಮಕ್ಕಳು ಕೆಲಸಕ್ಕೆ ಸೇರುವುದು ಬಂಡಾಯ ಪ್ರವೃತ್ತಿಯಾಗಿತ್ತು. ಅಂತಹ ಸಮಯದಲ್ಲಿ ಸ್ತ್ರೀ ಸಬಲೀಕರಣಕ್ಕೆ ಹೋರಾಡಿದ ಮಹಿಳೆಯರಲ್ಲಿ ಸಮಾಜ ಸೇವಕಿ ಯಶೋಧರಮ್ಮ ದಾಸಪ್ಪರವರು ಅಗ್ರಗಣ್ಯರು. ಅವರು ಕೇಂದ್ರದಲ್ಲಿ ರೈಲ್ವೆ ಮಂತ್ರಿಯಾಗಿದ್ದ ಎಚ್.ಸಿ. ದಾಸಪ್ಪನವರ ಧರ್ಮಪತ್ನಿ. ಮುಂದೆ ಅವರು ಸಮಾಜ ಕಲ್ಯಾಣ ಮಂತ್ರಿಯೂ ಆದರು.

ದಾಸಪ್ಪ ದಂಪತಿಗಳ ಪುತ್ರ ತುಳಸಿ ದಾಸಪ್ಪನವರು ಪಾರ್ಲಿಮೆಂಟ್ ಸದಸ್ಯರಾಗಿದ್ದು ಮೈಸೂರಿನ ಒಂಟಿಕೊಪ್ಪಲಿನಲ್ಲಿ ಮೈಸೂರು ಆಕಾಶವಾಣಿಯ ಬಳಿ ವಾಸವಾಗಿದ್ದರು. ಅವರ ಮನೆಯ ಆವರಣದಲ್ಲೇ ಯಶೋಧರಮ್ಮ ದಾಸಪ್ಪನವರು ಮಹಿಳೆಯರಿಗಾಗಿ ಒಂದು ಸಣ್ಣ ಗೃಹಕೈಗಾರಿಕೆ ಸ್ಥಾಪಿಸಿದರು. ಬೆಂಗಳೂರಿನ ಐ.ಟಿ.ಐ. ಕಾರ್ಖಾನೆಗಾಗಿ ಟೆಲಿಫೋನ್ ಡಯಲ್‌ನ ಬಿಡಿಭಾಗವನ್ನು (ಕಾಂಪೊನೆಂಟ್) ತಯಾರಿಸುವ ಏರ್ಪಾಟು ಮಾಡಿ ಮೈಸೂರಿನ ಹೆಣ್ಣುಮಕ್ಕಳಿಗೆ ಸ್ವಲ್ಪ ದಿನದ ತರಬೇತಿ ಬೆಂಗಳೂರಲ್ಲಿ ಕೊಟ್ಟು ಕಾರ್ಖಾನೆಗೆ ಚಾಲನೆ ಕೊಟ್ಟರು. ನನ್ನ ಸಹಪಾಠಿ ಹಾಗೂ ಆತ್ಮೀಯ ಗೆಳತಿ ಜಯಶ್ರೀಯವರ ಚಿಕ್ಕಮ್ಮಂದಿರಾದ ಎಂ.ಆರ್. ಲಕ್ಷಮ್ಮ (ಮೈಸೂರಿನ ರಾಜಕೀಯದಲ್ಲಿ ಹೆಸರು ಮಾಡಿದಂತಹ ಪ್ರಸಿದ್ಧರು) ಹಾಗೂ ಅವರ ಸಹೋದರಿ ಸೇರು ಸಾವಿತ್ರಿಯವರ ಮೂಲಕ ನಾನು ನನ್ನ ಕೆಲವು ಗೆಳತಿಯರು ಮನೆಯವರನ್ನು ಒಪ್ಪಿಸಲು ದೊಡ್ಡ ದೊಡ್ಡ ಹೆಸರುಗಳನ್ನು ಬಳಸಿ ಯಶಸ್ವಿಯಾದೆವು. ಈಗಿನಂತೆ ಸಂಬಳದ ಆಕರ್ಷಣೆಗಿಂತ ನಾವೂ ಕೆಲಸಕ್ಕೆ ಸೇರಬಹುದೆಂಬ ಹುಮ್ಮಸ್ಸು ಉತ್ಸಾಹ ಇತ್ತು. ಆ ಉತ್ಸಾಹವೇ ನನಗೆ ಬಹುಬೇಗ ಸೂಪರ್‌ವೈಸರ್ ಆಗಿ ಬಡ್ತಿ ಪಡೆಯಲು ಸಹಾಯ ಮಾಡಿತು.

ನಮ್ಮ ಸಂಸ್ಥೆಗೆ ಇಂದಿರಾಗಾಂಧಿಯವರು ಬರುತ್ತಾರೆಂಬ ಸುದ್ದಿ ಬಂದದ್ದೇ ತಡ ನಾವೆಲ್ಲ ಸುತ್ತಮುತ್ತಲಿನ ಜಾಗವನ್ನೆಲ್ಲ ಸ್ವಚ್ಛ ಮಾಡಿದೆವು. ದೊಡ್ಡ ರಂಗೋಲಿಯನ್ನು ಬಿಡಿಸಿದೆವು. ನಾವು ಕಾತುರದಿಂದ ಕಾಯುತ್ತಿದ್ದ ಕ್ಷಣ ಬಂದೇ ಬಿಟ್ಟಿತು. ರಭಸದ ನಡಿಗೆಯ ಸುರದ್ರೂಪಿ ಇಂದಿರಾಗಾಂಧಿ ಮಿಂಚಿನಂತೆ ಧಾವಿಸಿದರು. ಕಾಶ್ಮೀರದ ಬೆಡಗೇನೆಂದು ನಮಗೆಲ್ಲ ಅರಿವಾಗಿದ್ದೇ ಇಂದಿರಾಗಾಂಧಿಯವರ ದರ್ಶನವಾದ ಮೇಲೆ ತಕ್ಷಣಕ್ಕೆ ಎಲ್ಲರೂ ಪುಳಕಿತರಾದೆವು. ಸುತ್ತಮುತ್ತಲಿನ ಜನರೆಲ್ಲ ಓಡಿ ಬಂದು ನಿಂತರು. ಅಂತಹ ಅಮೃತಘಳಿಗೆಯಲ್ಲಿ ದಾಸಪ್ಪನವರ ಪತ್ನಿ ನನ್ನನ್ನು ಇಂದಿರಾ ಗಾಂಧಿಯವರಿಗೆ ಆರತಿ ಎತ್ತುವುದಕ್ಕೆ ಆಹ್ವಾನಿಸಿದರು. ನನ್ನ ಕಿರೀಟಕ್ಕೆ ಒಂದು ದೊಡ್ಡ ಗರಿ ಸಿಕ್ಕಿಸಿದಂತಾಯಿತು. ಆ ಅಪೂರ್ವ ಆಯ್ಕೆಗೆ ನನ್ನಲ್ಲಿದ್ದ ಅರ್ಹತೆ ಏನೆಂದು ತಲೆಕೆಡಿಸಿಕೊಳ್ಳುವಷ್ಟರಲ್ಲಿ ನನಗೆ ಹೊಳೆದದ್ದು '....ನಾಮದ ಬಲವೊಂದಿದ್ದರೆ ಸಾಕು' ಎಂಬ ಸಾಲುಗಳು. 'ಇಂದಿರಾಗಾಂಧಿಯವರಿಗೆ ಈಗ ನಮ್ಮ ಎಚ್.ಎಸ್. ಇಂದಿರಾ ಆರತಿ ಬೆಳಗುತ್ತಾರೆ' ಎಂದು ಯಶೋಧರಮ್ಮ ದಾಸಪ್ಪ ಜೋರಾಗಿ ಹೇಳಿದ್ದು ಇನ್ನೂ ನನ್ನ ಕಿವಿಯಲ್ಲಿ ತಮಟೆ ಬಾರಿಸುತ್ತಿದೆ.

ನನಗೆ ಹೆಸರಿಟ್ಟ ನಮ್ಮಮ್ಮನಿಗೆ ಕೋಟಿ ನಮನ ಮನಸ್ಸಿನಲ್ಲೇ ಮಾಡಿದೆ. ಈ ಫೋಟೋವನ್ನು ನಮ್ಮಮ್ಮ ತಾವು ಬದುಕಿರುವವರೆಗೂ ಮನೆಗೆ ಬಂದವರಿಗೆಲ್ಲ ತೋರಿಸಿ ಸಂಭ್ರಮಪಡುತ್ತಿದ್ದುದು. ಅದನ್ನು ಜತನದಿಂದ ಕಾಪಾಡಿದ್ದನ್ನು ನೆನೆಸಿಕೊಂಡರೆ ಅಮ್ಮನ ಕಣ್ಣಿನಲ್ಲಿದ್ದ ಸಂಭ್ರಮ ನನ್ನ ಕಣ್ಮುಂದೆ ಬರುತ್ತೆ. ಇಂದಿನ ರಿಯಾಲಿಟಿ ಶೋಗಳಲ್ಲಿ ಪ್ರಶಸ್ತಿ ಬಂದ ಮಕ್ಕಳ ತಂದೆ ತಾಯಿಗಳಂತೆ ಆ ಕಾಲಕ್ಕೆ ನಮ್ಮಮ್ಮ ಪಟ್ಟಿದ್ದ ಸಂತೋಷ ಕಾಣುತ್ತದೆ. ಇಂದಿರಾಗಾಂಧಿಯವರ ಜನ್ಮಶತಾಬ್ದಿಯ ಸುಸಮಯದಲ್ಲಿ ನನ್ನ ಸವಿನೆನಪುಗಳು ಗರಿಗೆದರಿವೆ.